ಇಂದು ಸಾರ್ವಜನಿಕ ಸಮಾಲೋಚನಾ ಸಭೆ

ಮೈಸೂರು: ನಗರ ಪಾಲಿಕೆಯ ವತಿಯಿಂದ 2022-23ನೇ ಸಾಲಿನ ಪರಿಷ್ಕೃತ ಹಾಗೂ 2023-24ನೇ ಸಾಲಿನ ಅಂದಾಜು ಆಯವ್ಯಯ ತಯಾರಿಸಲು ನಗರದ ಅಭಿವೃದ್ಧಿ ದೃಷ್ಟಿಯಿಂದ ನಗರದ ಸಮಸ್ತ ನಾಗರಿಕರು ಮತ್ತು ಸಂಘ-ಸಂಸ್ಥೆಗಳ ಅಭಿಪ್ರಾಯ ಮತ್ತು ಸಲಹೆ ಪಡೆಯಲು 2ನೇ ಸುತ್ತಿನ ಸಾರ್ವಜನಿಕ ಸಮಾಲೋಚನಾ ಸಭೆಯನ್ನು ಜ. 4 ರಂದು ಮಾನಸ ಗಂಗೋತ್ರಿಯ ರಾಣಿಬಹದ್ದೂರ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಮಹಾಸಂತ ಸಿದ್ಧೇಶ್ವರ ಸ್ವಾಮೀಜಿ

ಸಂತಾಪ ಸೂಚಕ ಸಭೆಯಲ್ಲಿ ಡಾ.ಬಿ. ಪ್ರಭುಸ್ವಾಮಿ ಕಟ್ನವಾಡಿ ಅಭಿಮತ

• **ಕನ್ನಡಪ್ರಭ ವಾರ್ತೆ** ಮೈಸೂರು

ಶ್ರೀ ಸಿದ್ಧೇಶ್ವರ ಸ್ವಾಮೀಜಿ ವಿಶ್ವಕಂಡ ಮಹಾಸಂತರಾಗಿದ್ದಾರೆ ಎಂದು ಪ್ರಾಧ್ಯಾಪಕ ಡಾ.ಬಿ. ಪ್ರಭುಸ್ವಾಮಿ ಕಟ್ನವಾಡಿ ತಿಳಿಸಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಸಂತಾಪ ಸೂಚಕ ಸಭೆಯಲ್ಲಿ ಮಾತನಾಡಿದ ಅವರು, ಸಿದ್ಧೇಶ್ವರ ಶ್ರೀಗಳು ಭಕ್ತರಿಂದ ನಡೆದಾಡುವ ದೇವರೆಂದು ಆರಾಧಿಸಲ್ಪಟ್ಟವರು, ಸರಳವಾದ ಬದುಕನ್ನು ನಡೆಸಿದವರು ಎಂದರು.

ಶ್ರೀಗಳ ಪ್ರವಚನದಲ್ಲಿ ಹೂವಿಗೆ ಮಹತ್ವದ ಸ್ಥಾನವಿತ್ತು. ಅಂತಹ ಹೂವಿನಂತೆಯೇ ಬದುಕು ಸಾಗಿಸಿ ಅದರ ಸುವಾಸನೆಯನ್ನು ಭಕ್ತರಿಗೆ ನೀಡಿ ಸಾರ್ಥಕವಾದ ಆಧ್ಯಾತ್ಮಿಕ ಬದುಕನ್ನು ಸಾಗಿಸಿದವರು. ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು ಬಯಲು ಬಯಲಾಗಿ ಬಯಲಾದಿರಯ್ಯ ಎಂಬ ಅಲ್ಲಮನ ಮಾತು ಶ್ರೀಗಳ ಬದುಕಿಗೆ ಅರ್ಥವತ್ತಾದುದು ಎಂದು ಅವರು ಹೇಳಿದರು.

ಪ್ರಶಸ್ತಿಗಳು ಅರಸಿ ಬಂದರೂ ಸನ್ಯಾಸಿಯಾದ ನನಗೆ ಅವುಗಳ ಹಂಗೇಕೆ ಎಂದು ನಯವಾಗಿ ತಿರಸ್ಕರಿಸಿದವರು. ಆಧ್ಯಾತ್ಮದ ಸವಿಜೇನನ್ನು ಭಕ್ತ ಸಮುದಾಯಕ್ಕೆ ಹರಡಿ, ಅಲ್ಲಿ ಶಾಶ್ವತವಾದ ಸ್ಥಾನವನ್ನು ಪಡೆದಿದ್ದಾರೆ. ಅವರು ಹೇಳಿರುವ ಸನ್ಮಾರ್ಗದತ್ತ ಸಾಗಿದರೆ ಅದುವೆ ಅವರ ದಿವ್ಯ ಚೇತನಕ್ಕೆ ನಾವು ಕೊಡುವ ಗೌರವವಾಗುತ್ತದೆ ಎಂದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ. ಸಾಂಬಶಿವಯ್ಯ, ಪದವಿ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಂ.ಪಿ. ವಿಜಯೇಂದ್ರಕುಮಾರ್, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಎಸ್. ಸೋಮಶೇಖರ್, ಅಧ್ಯಾಪಕ, ಅಧ್ಯಾಪಕೇತರ ವರ್ಗ ಮತ್ತು ವಿದ್ಯಾರ್ಥಿಗಳು ಇದ್ದರು.

ಕಲ್ಲೆದೆಯಂತಹ ವ್ಯಕ್ತಿಗಳಲ್ಲೂ ಪುಷ್ಪ ಅರಳಿಸುತ್ತಿದ್ದ ಶ್ರೀಗಳ ಪ್ರವಚನ

• **ಕನ್ನಡಪ್ರಭ ವಾರ್ತೆ** ಮೈಸೂರು

ಶತಮಾನ ಕಂಡ ಸದ್ಗುರು ಶ್ರೀ ಸಿದ್ಧೇಶ್ವರ ಶ್ರೀಗಳ ಪ್ರವಚನಗಳು ಕಲ್ಲೆದೆಯಂತಹ ವ್ಯಕ್ತಿಗಳಲ್ಲೂ ಪರಿಮಳದ ಪುಷ್ಪವನ್ನು ಅರಳಿಸುತ್ತಿತ್ತು ಎಂದು ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಹೇಳಿದರು.

ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ಬೋಗಾದಿಯ ಶಾರದಾನಗರ ರೈಲ್ವೆ ಬಡಾವಣೆಯ ಶರಣು ಕುಟೀರದಲ್ಲಿ ಹಮ್ಮಿಕೊಂಡಿದ್ದ ಸಿದ್ಧೇಶ್ವರ ಶ್ರೀಗಳಿಗೆ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ ಸಂಪಾದನೆಯು ಜೀವನದಲ್ಲಿ ಸಂತೃಪ್ತಿ ಮತ್ತು ಸಂತೋಷವನ್ನು ಕಾಣಲು ಕಾರಣವಾಗಬೇಕೆ ಹೊರತು ದುರಾಸೆಯನ್ನು ಹೆಚ್ಚಿಸಿ ಒತ್ತಡ ಮತ್ತು ಉದ್ವೇಗಕ್ಕೆ ಒಳಗಾಗಬಾರದು ಎಂದು ತಮ್ಮ ಪ್ರವಚನದುದ್ದಕ್ಕೂ ಸರಳತೆಯ ನೀತಿಸಾರವನ್ನು ಉಣಬಡಿಸುತ್ತಿದ್ದ ಶ್ರೀಗಳು ಸ್ವತಃ ತಾವೇ ಸರಳತೆಯ ಸಾಕಾರಮೂರ್ತಿಗಳಾಗಿ ಸದಾಕಾಲ ಬಿಳಿ ಉಡುಗೆ ಧರಿಸಿ ಇತರರಿಗೆ ಮಾದರಿಯಾಗಿದ್ದರು ಎಂದರು.

ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ, ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ವಾಜಂತ್ರಿ, ಕಾರ್ಯದರ್ಶಿ ಅನಿತಾ ನಾಗರಾಜ್, ಕೇಂದ್ರೀಯ ಸಂಚಾಲಕರಾದ ವಿ. ಲಿಂಗಣ್ಣ, ಮಂಜುಳ ಶಿವಪ್ರಸಾದ್, ನಾಗರಾಜ್, ವಚನ ಇದ್ದರು.

ಕೆ.ಆರ್. ಕವಿರಾಜ್‌ಗೆ ಬಹುಮಾನ

ಮೈಸೂರು: ಇತ್ತೀಚೆಗೆ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಅಥ್ಲೆಟಿಕ್ ಸ್ಪರ್ಧೆಯಲ್ಲಿ ಮೈಸೂರಿನ ರೋಟರಿ ಮಿಡ್‌ಟೌನ್ ಅಕಾಡೆಮಿಯ 8ನೇ ತರಗತಿಯ ವಿದ್ಯಾರ್ಥಿ ಕೆ.ಆರ್. ಕವಿರಾಜ್ 600 ಮೀ. ಓಟದ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಹಾಗೂ 1500 ಮೀ. ಓಟದಲ್ಲಿ ಮೂರನೇ ಬಹುಮಾನವನ್ನು ಪಡೆದಿದ್ದಾರೆ. ಈ ವಿದ್ಯಾರ್ಥಿಯನ್ನು ಶಾಲೆಯ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಶಿಕ್ಷಕರು ಅಭಿನಂದಿಸಿದ್ದಾರೆ.

ಅಪರಿಚಿತ ವ್ಯಕ್ತಿ ಸಾವು

ಮೈಸೂರು: ನಗರದ ಇರ್ವಿನ್ ರಸ್ತೆ ಮೈಸೂರು ವೈದ್ಯಕೀಯ ಕಾಲೇಜಿನ ಎಸ್‌ಬಿಐ ಕಾಂಪೌಂಡ್ ಫುಟ್‌ಪಾತ್ ಮೇಲೆ 60 ವರ್ಷದ ಅಪರಿಚಿತ ವ್ಯಕ್ತಿ ಸೋಮವಾರ ಮೃತಪಟ್ಟಿದ್ದಾರೆ.

ಮೃತರ ಚಹರೆ- 5.5 ಅಡಿ ಎತ್ತರ, ಕೋಲು ಮುಖ, ಸಾಧಾರಣ ಶರೀರ, ಕಪ್ಪು ಬಿಳಿ ಮಿಶ್ರಿತ ತಲೆ ಕೂದಲು, ಗಡ್ಡ ಮೀಸೆ ಬಿಟ್ಟಿದ್ದಾರೆ. ಬಲ ಪಕ್ಕೆಯಲ್ಲಿ 2 ಸಣ್ಣ ಕಪ್ಪು ಕಾರೆ ಹರಳಿನ ಗುರುತಿದೆ. ಕಾಫಿ ಬಣ್ಣದ ಟೀ-ಶರ್ಟ್, ಪಾಚಿ ಬಣ್ಣದ ಅಂಡರ್‌ವೇರ್ ಧರಿಸಿದ್ದಾರೆ. ಮೃತರ ವಾರಸುದಾರರು ಇದ್ದಲ್ಲಿ ದೂ. 0821- 2418313 ಸಂಪರ್ಕಿಸಲು ಮಂಡಿ ಠಾಣೆಯ ಪೊಲೀಸರು ಕೋರಿದ್ದಾರೆ.

ಮಹಮದ್ ಮುಸ್ತಾಫಗೆ ಪಿಎಚ್.ಡಿ

ಮೈಸೂರು: ಡಾ.ಮುಜಾಫರ್ ಅಸ್ಸಾದಿ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿದ ಪಿ.ಎಸ್. ಮಹಮದ್ ಮುಸ್ತಾಫ ಅವರು ಸಲ್ಲಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಅಂಗೀಕರಿಸಿ, ರಾಜ್ಯಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ ಪದವಿ ನೀಡಿದೆ.

ಕರ್ನಾಟಕ ಗ್ರಾಮೀಣ ಬ್ಯಾಂಕ್
(ಸರ್ಕಾರಿ ಸ್ವಾಮ್ಯದ ಸಡ್ಯೂಲ್ಡ್ ಬ್ಯಾಂಕ್ ಪ್ರಪ್ರಾಯೋಜಕರು: ಕೆನರಾ ಬ್ಯಾಂಕ್)
ಮುಖ್ಯ ಕಛೇರಿ, ಬಳ್ಳಾರಿ.
ಪ್ರಾದೇಶಿಕ ಕಛೇರಿ : ಮೈಸೂರು, ರಿಕವರಿ & ಲೀಗಲ್ ವಿಂಗ್
ನಂ. ಸಿ.ಎ. 20, ವಿಜಯನಗರ 2ನೇ ಹಂತ, ಮೈಸೂರು-570017.
ಫೋನ್ : 0821 – 2469563, ಇ-ಮೇಲ್ : br2501@kgbk.in

ಸ್ಥಿರಾಸ್ತಿಯ ಸ್ವಾಧೀನ ಸೂಚನೆ (ನಿಯಮ8(1))

ಹಣಕಾಸು ಸ್ವತ್ತುಗಳ ಪ್ರಭೂತೀಕರಣ ಮತ್ತು ಸ್ವಾಧೀನಕರಣ ಹಾಗೂ ಭದ್ರತಾ ಹಿತಾಸಕ್ತಿ (ಎನ್‌ಫೋರ್ಸ್‌ಮೆಂಟ್) ಜಾರಿ ಅಧಿನಿಯಮ 2002ರ ಅಡಿಯಲ್ಲಿ ಪ್ರಕರಣ 13(12)ರ ನಿಯಮ 3ರಲ್ಲಿನ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ 2002ರ ಅನುಸಾರ ನೀಡಲಾದ ಅಧಿಕಾರವನ್ನು ಚಲಾಯಿಸಿ, ಈ ಕೆಳಗೆ ಸಹಿ ಮಾಡಿರುವ, **ಕರ್ನಾಟಕ ಗ್ರಾಮೀಣ ಬ್ಯಾಂಕ್**, ಇದರ ಅಧಿಕೃತ ಅಧಿಕಾರಿಯಾಗಿದ್ದು ಹಣದ ನೋಟೀಸನ್ನು ಕೆಳಕಂಡ ಸಾಲಗಾರರಿಗೆ ನೀಡಲಾಗಿದ್ದು, ಸದರಿ ಸೂಚನೆ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ಸೂಚನೆಯಲ್ಲಿ ತಿಳಿಸಿದ ಮೊಬಲಗು ಮತ್ತು ಬಡ್ಡಿಯನ್ನು ಮರುಪಾವತಿ ಮಾಡಲು ಕೆಳಗೆ ಸೂಚಿಸಿರುವ ಸಾಲಗಾರರಿಗೆ/ ಆಡಮಾನದಾರರಿಗೆ/ ಜಾಮೀನುದಾರರಿಗೆ ಕೆಳಗೆ ತಿಳಿಸಿದ ದಿನಾಂಕದಂದು ನೀಡಿದ ಡಿಮ್ಯಾಂಡ್ ನೋಟೀಸಿನಲ್ಲಿ ಸೂಚಿಸಲಾಗಿತ್ತು. ಈ ಮೊತ್ತವನ್ನು ಮರುಪಾವತಿಸಲು ವಿಫಲರಾಗಿರುವುದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಸದರಿ ನಿಯಮಗಳ ನಿಯಮ 8 ಓದಿಕೊಂಡಂತೆ ಅಧಿನಿಯಮದ ಪ್ರಕರಣ 13(4)ರ ಅನ್ವಯ ಆತಬಗೆ/ ಅಕೆಗೆ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ, ಕೆಳ ಸಹಿದಾರರು ಕೆಳಗೆ ವಿವರಿಸಿರುವ ಸ್ವತ್ತನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ.
ಈ ಮೂಲಕ ಸಾಲಗಾರರಿಗೆ ಕರೆ ನೀಡುವುದೇನೆಂದರೆ ಭದ್ರತಾ ಸ್ವತ್ತುಗಳನ್ನು ಪ್ರಕರಣ 13ರ ಉಪ-ಪ್ರಕರಣ (8)ರಂತೆ, ಲಭ್ಯವಿರುವ ಸಮಯದಲ್ಲಿ ಪಡೆದುಕೊಳ್ಳಬೇಕು. ಸದರಿ ಸ್ವತ್ತಿನ ಬಗ್ಗೆ ಯಾರೂ ವ್ಯವಹರಿಸದಾರದಾಗಿ ಮತ್ತು ಸದರಿ ಸ್ವತ್ತುಗಳ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೇ ಆದರೆ ಅದು, **ಕರ್ನಾಟಕ ಗ್ರಾಮೀಣ ಬ್ಯಾಂಕ್, ಕೆಳಕಂಡ ಶಾಖೆಗಳಿಗೆ** ಬರಬೇಕಾಗಿರುವ ಕೆಳಕಂಡ ಮೊತ್ತ ಮತ್ತು ಇದರ ಮೇಲಿನ ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸುವುದಕ್ಕೆ ಒಳಪಟ್ಟಿರುತ್ತದೆ, ಎಂಬುದಾಗಿ ನಿರ್ದಿಷ್ಟವಾಗಿ ಸಹ-ಸಾಲಗಾರರುಗಳಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡಲಾಗಿದೆ.

ಶಾಖೆ : ಹಿಸಲೆ

1) **ಸಾಲಗಾರರ ಹೆಸರು : ಶ್ರೀಮತಿ ಎಸ್.ಕೆ. ಮಂಜುಳ** ಕೋಂ. ಜಗದೀಶ್ ಮತ್ತು **ಶ್ರೀ ಜಗದೀಶ್** ಬಿನ್ ಮಾಚಯ್ಯಾಯ್ಯ, **ಇದರಿಬ್ಬರ ವಿಳಾಸ :** ನಂ. 599, 2ನೇ ಫೇಸ್, 4ನೇ ಹಂತ, ವಿಜಯನಗರ, ಮೈಸೂರು ಮತ್ತು **ಜಾಮೀನುದಾರರು : ಶ್ರೀ ಬೈರ ಎಸ್** ಬಿನ್ ಸಿದ್ದ ಶೆಟ್ಟಿ, **ವಿಳಾಸ :** ನಂ. 05, ಗೋಪಿಕಾ ಶಾಲೆ ಮುಖ್ಯರಸ್ತೆ, ಪಾವಣ್ಣ ಲೇಔಟ್, ಯರಗನಹಳ್ಳಿ, ಮೈಸೂರು.
ಡಿಮ್ಯಾಂಡ್ ನೋಟೀಸ್ ದಿನಾಂಕ: 03.08.2022 **ಸ್ವಾಧೀನ ನೋಟೀಸ್ ದಿನಾಂಕ: 30.12.2022**
ಬಾಕಿ ಇರುವ ಮೊತ್ತ : ರೂ. 6,91,206.22/- (ರೂಪಾಯಿ ಆರು ಲಕ್ಷದ ತೊಂಭತ್ತೊಂದು ಸಾವಿರದ ಇನ್ನೂರ ಆರು ಮತ್ತು ಇಪ್ಪತ್ತೆರಡು ಪೈಸೆಗಳು ಮಾತ್ರ) ಬಡ್ಡಿ ಹಾಗೂ ಇತರೆ ಖರ್ಚು ವೆಚ್ಚಗಳು.
ಭದ್ರತಾ ಆಸ್ತಿಯ ವಿವರಣೆ : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಂತೆ ಆಸ್ತಿಯನ್ನು ನಂ. 599, 2ನೇ ಫೇಸ್, 4ನೇ ಹಂತ, ವಿಜಯನಗರ ಬಡಾವಣೆ, ಮೈಸೂರು. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 09.00 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ 6.00 ಮೀಟರ್‌ಗಳು. **ಚಕ್ಕುಬಂದಿ : ಉತ್ತರಕ್ಕೆ** : ಸೈಟ್ ನಂ. 598, **ದಕ್ಷಿಣಕ್ಕೆ** : ಸೈಟ್ ನಂ. 600, **ಪೂರ್ವಕ್ಕೆ** : ಸೈಟ್ ನಂ. 620, **ಪಶ್ಚಿಮಕ್ಕೆ** : ರಸ್ತೆ

ಶಾಖೆ : ಯರಗನಹಳ್ಳಿ

1) **ಸಾಲಗಾರರ ಹೆಸರು : ಶ್ರೀಮತಿ ಶಾಮಣಿ** ಕೋಂ. ಪುಟ್ಟರಾಜು. **ವಿಳಾಸ :** ನಂ. 75, 4ನೇ ಕ್ರಾಸ್, ಗಿರಿಯಾಭೋವಿಪಾಳ್ಯ, ನಜರಾಬಾದ್, ಮೈಸೂರು ಮತ್ತು **ಜಾಮೀನುದಾರರು : ಶ್ರೀ ಗೋಪಿ .ಡಿ** ಬಿನ್ ಲೇಟ್ ದಶರಥ್. **ವಿಳಾಸ :** ನಂ. 1796/ಬಿ, 1ನೇ ಮೈನ್, ಗಿರಿಯಾಭೋವಿಪಾಳ್ಯ, ಮೈಸೂರು.
ಡಿಮ್ಯಾಂಡ್ ನೋಟೀಸ್ ದಿನಾಂಕ: 17.10.2022 **ಸ್ವಾಧೀನ ನೋಟೀಸ್ ದಿನಾಂಕ: 30.12.2022**
ಬಾಕಿ ಇರುವ ಮೊತ್ತ : ರೂ. 3,72,005.20/- (ರೂಪಾಯಿ ಮೂರು ಲಕ್ಷದ ಎಪ್ಪತ್ತೆರಡು ಸಾವಿರದ ಐದು ಮತ್ತು ಇಪ್ಪತ್ತು ಪೈಸೆಗಳು ಮಾತ್ರ) ಬಡ್ಡಿ ಹಾಗೂ ಇತರೆ ಖರ್ಚು ವೆಚ್ಚಗಳು.
ಭದ್ರತಾ ಆಸ್ತಿಯ ವಿವರಣೆ : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಂತೆ ಆಸ್ತಿ ನಂ. 75, 4ನೇ ಕ್ರಾಸ್, ಗಿರಿಯಾಭೋವಿಪಾಳ್ಯ, ನಜರಾಬಾದ್ ಮೊಹಲ್ಲಾ, ಮೈಸೂರು. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 30 ಅಡಿ, ಉತ್ತರದಿಂದ ದಕ್ಷಿಣಕ್ಕೆ 20 ಅಡಿ. **ಚಕ್ಕುಬಂದಿ : ಉತ್ತರಕ್ಕೆ** : ಮನೆ ನಂ. 74, **ದಕ್ಷಿಣಕ್ಕೆ** : ಮನೆ ನಂ. 76, **ಪೂರ್ವಕ್ಕೆ** : ರಸ್ತೆ, **ಪಶ್ಚಿಮಕ್ಕೆ** : ಟ್ರಾಂಕ್ ಪ್ರದೇಶ.

ದಿನಾಂಕ : 30.12.2022 ಸಹಿ/- ಅಧಿಕೃತ ಅಧಿಕಾರಿ,
ಸ್ಥಳ : ಮೈಸೂರು ಕರ್ನಾಟಕ ಗ್ರಾಮೀಣ ಬ್ಯಾಂಕ್

ವಿಜಯಪುರದ ಶ್ರೀ ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮಿಗಳವರ ನಿಧನದ ಹಿನ್ನೆಲೆ ಮೈಸೂರು ಶ್ರೀ ಸುತ್ತೂರು ಮಠದ ಭಕ್ತವೃಂದದಿಂದ ವಾರ್ಡ್ ನಂ. 50ರ ವ್ಯಾಪ್ತಿಯ ಶಾಂತಲಾ ವೃತ್ತದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ನಗರಪಾಲಿಕೆ ಸದಸ್ಯರಾದ ವಿ. ಲೋಕೇಶ್ ಪಿಯಾ, ನಗರಪಾಲಿಕೆ ಮಾಜಿ ಸದಸ್ಯ ಜಾಕೀರ್‌ಪಾಷ, ಹಿಂದುಳಿದ ವರ್ಗಗಳ ಅಧ್ಯಕ್ಷ ಶಿವಮಲ್ಲು, ಎನ್‌ಎಸ್‌ಯುಐನ ಪ್ರಶಾಂತ್ ಆರ್ಯ ಇದ್ದರು,

ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರ ಜಿಲ್ಲಾ ಪ್ರವಾಸ

ಮೈಸೂರು: ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಎಂ. ಶಿವಣ್ಣ ಅವರು ಜ. 5 ರಂದು ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಅಂದು ಬೆಳಗ್ಗೆ 10ಕ್ಕೆ ಹೂಟಗಳ್ಳಿ ನಗರಸಭೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರೊಂದಿಗೆ ಹಾಗೂ ಮುಖಂಡರೊಂದಿಗೆ ಚರ್ಚೆ ನಡೆಸುವರು. ಬೆಳಗ್ಗೆ 11ಕ್ಕೆ ಹೂಟಗಳ್ಳಿ ನಗರಸಭೆಯಲ್ಲಿ ಪೌರಕಾರ್ಮಿಕರ ಸಮಸ್ಯೆಗಳ ಬಗ್ಗೆ ಅಧಿಕಾರಿಗಳೊಡನೆ ಸಭೆ ನಡೆಸುವರು. ಮಧ್ಯಾಹ್ನ 12ಕ್ಕೆ ಜಲದರ್ಶಿನಿ ಅತಿಥಿ ಗೃಹದಲ್ಲಿ ಮೈಸೂರು ನಗರ ಮತ್ತು ಗ್ರಾಮೀಣ ಭಾಗದಲ್ಲಿ ಸ್ಲಂಬೋರ್ಡ್ ವತಿಯಿಂದ ನಿರ್ಮಿಸಲಾದ ವಸತಿ ಗೃಹಗಳ ಹಂಚಿಕೆಯ ಬಗ್ಗೆ ಚರ್ಚೆ ಹಾಗೂ ಮಧ್ಯಾಹ್ನ 3ಕ್ಕೆ ಮುಖಂಡರೊಡನೆ ಚರ್ಚಿಸುವುದಾಗಿ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷರ ಆಪ್ತ ಕಾರ್ಯದರ್ಶಿ ತಿಳಿಸಿದ್ದಾರೆ.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
An ISO-9001:2015 & 14001:2015 Company
ಶ್ರೀಗಂಧ ನಗರ: ಅಂಚೆ ಪೆಟ್ಟಿಗೆ ನಂ.5531, ಬೆಂಗಳೂರು-ಪೂರ್ವ ಹೆದ್ದಾರಿ, ಬೆಂಗಳೂರು -560 055. ದೂರವಾಣಿ: 080-23378715, 23371103
ಫ್ಯಾಕ್ಸ್: 23375102, 23370498, ಜಾಲತಾಣ: www.mysoresandal.org ಇ-ಮೇಲ್: ksdl.dgmmtls@gmail.com
ದಿನಾಂಕ: 03.01.2023

ಟೆಂಡರ್ ಪ್ರಕಟಣೆ

ಕೆಎಸ್&ಡಿಎಲ್ ಸಂಸ್ಥೆಗೆ ಈ ಕೆಳಕಂಡ ಉಪಕರಣಗಳ ಸರಕು/ಸೇವೆ/ಕಾಮಗಾರಿಗಳಿಗೆ ಇ-ಖರೀದಿ ಪೋರ್ಟಲ್ ಜಾಲತಾಣ (https://eproc.karnataka.gov.in) ದ ಮೂಲಕ ದ್ವೀಲಕೋಟಿ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ	ಟೆಂಡರ್ ನಂಬರ್	ಟೆಂಡರ್ ಹೆಸರು	ಸಂಖ್ಯೆ	ಪ್ರಕಟಣೆ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	KSDL/2022-23/IND5404	ಬೆಂಜೈಲ್ ಅಸೀಟೆಟ್ (Benzyl Acetate) ನ ಖರೀದಿ	3900 ಕೆ.ಜಿ.	28.12.2022	11.01.2023
2	KSDL/2022-23/IND5405	ಟಿಂಬರೋಲ್ (Timberol) ನ ಖರೀದಿ	200 ಕೆ.ಜಿ	28.12.2022	11.01.2023
3	KSDL/2022-23/IND5406	ಲೆಮನ್ ಗ್ರಾಸ್ ಆಯಿಲ್ (Lemongrass Oil) ನ ಖರೀದಿ	600 ಕೆ.ಜಿ.	28.12.2022	11.01.2023
4	KSDL/2022-23/IND5407	ಹೆಕ್ಸಿಲ್ ಸಿನಾಮಿಕ್ ಆಲ್ಡಿಹೈಡ್ (Hexyl Cinnamic Aldehyde) ನ ಖರೀದಿ	1800 ಕೆ.ಜಿ.	28.12.2022	11.01.2023
5	KSDL/2022-23/IND5408	ಆಲ್ಡಿಹೈಡ್ ಸಿ-11 (Aldehyde C-11) ನ ಖರೀದಿ	400 ಕೆ.ಜಿ.	28.12.2022	11.01.2023
6	KSDL/2022-23/IND5409	ಡೈಹೈಡ್ರೊ ಐಸೋ ಜಾಸ್ಮೊನೇಟ್ (DHIJ)(Dihydro Iso Jasmonate (DHIJ))ನ ಖರೀದಿ	330 ಕೆ.ಜಿ.	28.12.2022	11.01.2023
7	KSDL/2022-23/IND5410	ಮೀಥೈಲ್ ಡೈಹೈಡ್ರೋ ಜಾಸ್ಮೋನೇಟ್ (MDHJ) (Methyl Dihydro Jasmonate(MDHJ)) ನ ಖರೀದಿ	430 ಕೆ.ಜಿ.	28.12.2022	11.01.2023
8	KSDL/2022-23/IND5411	ಮೀಥೈಲ್ ಸಿನಮೇಟ್ (Methyl Cinnamate) ನ ಖರೀದಿ	680 ಕೆ.ಜಿ.	28.12.2022	11.01.2023
9	KSDL/2022-23/IND5412	ಬ್ಯುಟಿಲೇಟೆಡ್ ಹೈಡ್ರಾಕ್ಸಿ ಟಾಲೀನ್ (BHT) (Butylated Hydroxy Toluene (BHT)) ನ ಖರೀದಿ	1200 ಕೆ.ಜಿ.	28.12.2022	11.01.2023
10	KSDL/2022-23/IND5413	ಇಂಡೋಲ್ (Indole) ನ ಖರೀದಿ	300 ಕೆ.ಜಿ.	28.12.2022	11.01.2023
11	KSDL/2022-23/IND5415	ಎಥಿಲೀನ್ ವೀನೈಲ್ ಅಸಿಟೇಟ್ (ಇವಿಎ) (Ethylene Vinyl Acetate(EVA)) ಆಧಾರಿತ ಹಾಟ್ ಮೆಲ್